## ಕೆಫೀನ್‌ನಿಂದ ಚರ್ಮ ಕ್ಯಾನ್ಸರ್ ದೂರ

ಕೆಲವರಿಗೆ ಬೆಳಿಗ್ಗೆ ಕಾಫಿ ಹೀರಿದರೆ ಸಮಾಧಾನ. ಕಾಫಿಯಲ್ಲಿರುವ ಕೆಫೀನ್ ಹಲವು ಸಮಸ್ಯೆ ತಂದೊಡ್ಡಲಿದೆ ಎಂಬ ಅಭಿಪ್ರಾಯ ಅವರಲ್ಲಿ ಕೆಲವೊಮ್ಮೆ ಆತಂಕ ತರುವುದುಂಟು. ಆದರೆ ಕೆಫೀನ್‌ನಿಂದ ಒಂದಿಷ್ಟು ಅನುಕೂಲಗಳೂ ಇವೆ. ಅವುಗಳಲ್ಲಿ ಮುಖ್ಯವಾಗಿ ಚರ್ಮ ಕ್ಯಾನ್ಸರನ್ನು ಆರಂಭಿಕ ಹಂತದಲ್ಲೇ ಹತ್ತಿಕ್ಕುವ ಸಾಮರ್ಥ್ಯ ಕೆಫೀನ್‌ಗೆ ಇದೆ ಎಂದು ತಜ್ಞರು ಇದೀಗ ಹೇಳಿದ್ದಾರೆ.

ಇಷ್ಟೇ ಅಲ್ಲ ಕೆಫೀನ್‌ಅನ್ನು ಚರ್ಮಕ್ಕೇ ಲೇಪಿಸಿಕೊಳ್ಳುವುದರಿಂದ ಚರ್ಮಕ್ಕೆ ಮಾರಕವಾಗಬಲ್ಲ ಅತಿ ನೇರಳೆ ಕಿರಣಗಳಿಂದ ರಕ್ಷಣೆ ಸಿಗಲಿದೆ. ಈ ಸಂಶೋಧನೆಗಾಗಿ ಇಲಿಗಳಿಗೆ ಕೆಫೀನ್ ಬೆರೆಸಿದ ನೀರನ್ನು ಕುಡಿಸಲಾಯಿತು. ನಂತರ ಅವುಗಳನ್ನು ತಿಳಿ ನೇರಳೆ ಕಿರಣಗಳಿಗೆ ಒಡ್ಡಲಾಯಿತು. ಆದರೆ ತ್ವಚೆಗೆ ಹಾನಿಯಾದರೂ ಹಾನಿಯಾದ ಭಾಗ ಕ್ಯಾನ್ಸರ್‌ನಿಂದ ಮುಕ್ತವಾಗಿತ್ತು. ಅಂದರೆ ಕಾಫಿ ಸೇವನೆಯಿಂದ 'ನಾನ್ ಮೆಲನೋಮಾ' ಚರ್ಮ ಕ್ಯಾನ್ಸರ್‌ನಿಂದ ಮುಕ್ತರಾಗಬಹುದು ಎಂದು ವಾಷಿಂಗ್‌ಟನ್ ವಿವಿ ಸಂಶೋಧಕರು ಅಭಿಪ್ರಾಯಪಡುತ್ತಾರೆ.

## ಮಗುವಿನ ಆರೋಗ್ಯದ ಗುಟ್ಟು

ಭ್ರೂಣಾವಸ್ಥೆಯ ಒಂಬತ್ತು ತಿಂಗಳು ಹಾಗೂ ಮಗು ಹುಟ್ಟಿದ ನಂತರದ ಮೊದಲ ಎರಡು ವರ್ಷಗಳು ಮಕ್ಕಳ ಆರೋಗ್ಯದ ದೃಷ್ಟಿಯಿಂದ ಬಹಳ ಉಪಯುಕ್ತ. ಈ ಹಂತದಲ್ಲಿನ ಅವರ ಆರೋಗ್ಯದ ಬೆಳವಣಿಗೆ ಮುಂದಿನ ಜೀವನಕ್ಕೆ ಸಹಕಾರಿಯಾಗಲಿದೆ ಎಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ.

ಮಕ್ಕಳ ಈ ಮೂರು ವರ್ಷಗಳ ಅಂತರದಲ್ಲಿ ಆಗಬಹುದಾದ ಯಾವುದೇ ಅವಘಡಗಳು ಅಥವಾ ಆರೋಗ್ಯದಲ್ಲಾಗುವ ಏರುಪೇರುಗಳು ಇಳಿ ವಯಸ್ಸಿನಲ್ಲಿ ಮಧುಮೇಹ ಅಥವಾ ಹೃದಯ ಸಂಬಂಧಿ ಕಾಯಿಲೆಗೆ ಕಾರಣವಾಗಬಹುದು ಎಂದು ಸೌತಾಂಪ್ಟನ್ ವಿವಿಯ ಪ್ರೊ.ಡೇವಿಡ್ ಬಾರ್ಕರ್ ಹಾಗೂ ಅವರ ತಂಡ ದಶಕಗಳಿಂದ ನಡೆಸಿದ ಸಂಶೋಧನೆಯ ನಂತರ ಅಭಿಪ್ರಾಯಪಟ್ಟಿದ್ದಾರೆ.

ಗರ್ಭಾವಸ್ಥೆಯಲ್ಲಿರುವಾಗಲೇ ಮಗುವಿನ ಬೆಳವಣಿಗೆಯಲ್ಲಾಗುವ ಏರುಪೇರುಗಳು ಮುಂದೆ ಅವರಿಗೆ ಸಾಕಷ್ಟು ಸಮಸ್ಯೆಗಳನ್ನು ತಂದೊಡ್ಡಬಹುದಾದ ಸಾಧ್ಯತೆಗಳು ಹೆಚ್ಚು. ಹುಟ್ಟುವಾಗ ಮಗುವಿನ ತೂಕ ತೀರಾ ಕಡಿಮೆ ಇದ್ದಲ್ಲಿ ಮುಂದೆ ಹೃದಯ ಸಂಬಂಧಿ ಕಾಯಿಲೆ ಸಾಧ್ಯತೆಗಳು ಹೆಚ್ಚಂತೆ. ಹುಟ್ಟುವ ಮೊದಲೇ ಮಧುಮೇಹಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚು. ಇದಕ್ಕೆ ಕಾರಣ ಭ್ರೂಣಾವಸ್ಥೆಯಲ್ಲೇ ದೇಹದಲ್ಲಿ ಇನ್ಸುಲಿನ್ ಉತ್ಪತ್ತಿ ಮಾಡುವ ಪ್ಯಾಂಕ್ರಿಯಾಟಿಕ್ ಜೀವಕೋಶಗಳು ಕೆಲಸ ಮಾಡದಿರುವುದು ಎಂದು ಅವರು ಹೇಳುತ್ತಾರೆ.

## ಕ್ಷಯಕ್ಕೆ ಶೀಘ್ರ ಪರಿಹಾರ

ಕ್ಷಯ (ಟಿಬಿ)ರೋಗಕ್ಕೆ ಕಡಿಮೆ ಖರ್ಚಿನಲ್ಲಿ ಶೀಘ್ರ ಪರಿಹಾರ ನೀಡುವ ಚಿಕಿತ್ಸೆಯೊಂದನ್ನು ಕಂಡುಹಿಡಿದಿರುವುದಾಗಿ ಸಂಶೋಧಕರು ಹೇಳಿದ್ದಾರೆ. ಡಾ.ಆಲಿವರ್ ಬ್ರೈಸ್ಸಂಟ್ ಹಾಗೂ ಅವರ ಸಹೋದ್ಯೋಗಿಗಳು ಈ ನೂತನ ಚಿಕಿತ್ಸೆ ಕಂಡುಹಿಡಿದಿದ್ದು, ಕ್ಷಯ ರೋಗಕ್ಕೆ ಈಗ ಲಭ್ಯವಿರುವ ಚಿಕಿತ್ಸೆಗಳಲ್ಲಿ ಇದು ಅತ್ಯಂತ ಪರಿಣಾಮಕಾರಿ ಎಂದು ಅವರು ಹೇಳುತ್ತಾರೆ.

ಕ್ಷಯಕ್ಕೆ ಕಾರಣವಾಗಬಲ್ಲ ಮೈಕೊಬ್ಯಾಕ್ಟೀರಿಯಂ ಟುಬರ್ಕೊಲೊಸಿಸ್ ಎಂಬ ಬ್ಯಾಕ್ಟೀರಿಯಾದ ಬೆಳವಣಿಗೆಯನ್ನು ಮೈಕ್ರೊಕ್ಯಾಲೋರಿಮೀಟರ್ ಬಳಸಿ ಡಾ.ಬ್ರೈಸ್ಸಂಟ್ ಹಾಗೂ ಅವರ ತಂಡ ಪರೀಕ್ಷಿಸಿತು. ಅದು ಮೊದಲಿಗೆ ಬ್ಯಾಕ್ಟೀರಿಯಾ ಬೆಳವಣಿಗೆ ಹೆಚ್ಚಾಗುತ್ತಿದ್ದಂತೆ ಅದಕ್ಕೆ ನೀಡುವ ರಾಸಾಯನಿಕ, ಭೌತಿಕ ಅಥವಾ ಜೈವಿಕ ಕ್ರಿಯೆಯನ್ನು ಗಮನಿಸಿತು. ಆಗ ಉತ್ಪತ್ತಿಯಾದ ಶಾಖವನ್ನು ವಿದ್ಯುತ್ ಸಂಕೇತಗಳಾಗಿ ಬದಲಾಯಿಸಿ ಅವುಗಳನ್ನು ಕಂಪ್ಯೂಟರ್‌ನಲ್ಲಿ ದಾಖಲಿಸಿದ ನಂತರ ಈ ಸಂಕೇತಗಳು ಆಯಾಯ ಬ್ಯಾಕ್ಟೀರಿಯಾಕ್ಕೆ ತಕ್ಕಂತೆ ನಕ್ಷೆ ತಯಾರಿದವು. ಹಾಗೆ ಈ ಬ್ಯಾಕ್ಟೀರಿಯಾಗಳಿಗೆ ಲಭ್ಯವಿರುವ ಕಡಿಮೆ ದರದ ಔಷಧ ನೀಡಿ ಉಪಚರಿಸಲು ಇದು ಸಹಕಾರಿಯಾಯಿತು.

■ ಐಎಎನ್‌ಎಸ್

---



ಆತ: ನನ್ನ ಕ್ರೆಡಿಟ್ ಕಾರ್ಡ್ ಕಳ್ಳತನವಾಯಿತು, ಆದರೂ ನಾನು ಪೊಲೀಸ್ ಕಂಪ್ಲೆಂಟ್ ಕೊಡ್ಲಿಲ್ಲ, ಬ್ಯಾಂಕ್‌ಗೂ ಇನ್‌ಫಾರ್ಮ್ ಮಾಡಲಿಲ್ಲ.

ಈತ: ಏಕೆ?

ಆತ: ಪಾಪ ಆ ಕಳ್ಳ ನನ್ನ ಹೆಂಡತಿಗಿಂತ ಕಡಿಮೆ ಖರ್ಚು ಮಾಡುತ್ತಿದ್ದಾನೆ ಅದಕ್ಕೆ

★★★

ಮಗ: ಡ್ಯಾಡ್..! ಫೈವ್ ಅಂಡ್ ಫೈವ್ ಎಷ್ಟು?

ತಂದೆ: ಥೂ ನಿನ್ನ ದಡ್ಡನ್ನ ತಂದು, ಅಷ್ಟೂ ಗೊತ್ತಿಲ್ಲವೇನೋ?

ಮಗ: ಸಾರಿ, ಡ್ಯಾಡ್

ತಂದೆ: ಹೋಗು; ಟೇಬಲ್ ಮೇಲೆ ಕ್ಯಾಲ್ಕುಲೇಟರ್ ಇದೆ ತೊಗೊಂಡು ಬಾ, ಹೇಳ್ತೀನಿ

★★★

ವಿದ್ಯಾರ್ಥಿ: ಸಿಂಹ ಮೂರು ಬಾರಿ ಘರ್ಜಿಸಿದಾಗ ಏನಾಗುತ್ತದೆ?

ಟೀಚರ್: ನನಗೆ ಗೊತ್ತಿಲ್ಲಪ್ಪ

ವಿದ್ಯಾರ್ಥಿ: ಟಾಮ್ ಅಂಡ್ ಜೆರ್ರಿ ಕಾರ್ಟೂನ್ ಸ್ಟಾರ್ಟ್ ಆಗುತ್ತದೆ.

★★★



### ಟೆನ್ಶನ್ ಅಂದರೆ ಏನು?



ನೀವು ಸಿನಿಮಾ ಹಾಡು ಹಾಡ್ಕೋತಾ ಕಾರು ಡ್ರೈವ್ ಮಾಡಿಕೊಂಡು ಒಬ್ಬರೇ ಹೋಗ್ತಿರ್ತೀರಿ. ಆಗ ದಾರಿಯಲ್ಲಿ ಒಂದು 'ಕ್ಯೂಟ್' ಹುಡುಗಿ ನಿಮಗೆ ಲಿಫ್ಟ್ ಕೇಳ್ತಾಳೆ. ನೀವು ಆಕೆಯನ್ನು ನಿಮ್ಮ ಪಕ್ಕ ಕೂಡಿಸಿಕೊಳ್ಳುತ್ತೀರಿ. ಸ್ವಲ್ಪ ದೂರ ಹೋದ ನಂತರ ಆಕೆ ಒಂದೇ ಸಮನೆ ವಾಂತಿ ಮಾಡಿಕೊಳ್ಳಲು ಆರಂಭಿಸುತ್ತಾಳೆ. ಆಗ ವೈದ್ಯರು ಅವಳನ್ನು ಪರೀಕ್ಷಿಸಿ 'ಕಂಗ್ರ್ಯಾಟ್ಸ್ ನೀವು ತಂದೆಯಾಗ್ತಿದ್ದೀರಿ' ಎಂದು ನಿಮಗೆ ಹೇಳುತ್ತಾರೆ. ನೀವು ಟೆನ್ಶನ್‌ಗೆ ಒಳಗಾಗುತ್ತೀರಿ. ಆದರೆ ಆ ಮಗು ನನ್ನದಲ್ಲ ಎಂದು ಹೇಳುತ್ತೀರಿ.

ಆದರೆ ಆ 'ಕ್ಯೂಟ್ ಗರ್ಲ್ ಸುಳ್ಳು ಹೇಳ್ತಿದ್ದಾರೆ. ಆತನೇ ನನ್ನ ಮಗುವಿನ ತಂದೆ' ಎಂದು ದೃಢವಾಗಿ ಹೇಳುತ್ತಾಳೆ. ನಿಮ್ಮ ಟೆನ್ಶನ್ ಗ್ರಾಫ್ ಇನ್ನೂ ಮೇಲಕ್ಕೇರುತ್ತದೆ.

ಹುಡುಗಿ ಮತ್ತು ನಿಮ್ಮ ನಡುವೆ ಭಾರೀ ಗಲಾಟೆ ಶುರುವಾಗುತ್ತದೆ. ಪೊಲೀಸರು ಅಲ್ಲಿಗೆ ಬರುತ್ತಾರೆ. ನಿಮ್ಮ ಮೆಡಿಕಲ್ ಚೆಕ್ ಅಪ್ ಆಗುತ್ತದೆ. ವೈದ್ಯಕೀಯ (ಲ್ಯಾಬ್) ವರದಿಯಲ್ಲಿ 'ನೀವು ತಂದೆಯಾಗಲು ಸಾಧ್ಯವೇ ಇಲ್ಲ' ಎಂಬ ಫಲಿತಾಂಶ ಬರುತ್ತದೆ. ಇನ್ನೂ ಟೆನ್ಶನ್ ಆಗುತ್ತದೆ.

ಆದಾಗ್ಯೂ. 'ದೇವರೇ! ನಿನಗೆ ಥ್ಯಾಂಕ್ಸ್... ಸಧ್ಯ! ನಾನು ಬಚಾವಾದೆ' ಎಂದು ಸಂತೋಷಾತಿರೇಕದಿಂದ ಮನೆಗೆ ದೌಡಾಯಿಸುತ್ತೀರಿ.

ನೀವು ಮನೆಗೆ ಬಂದು ಫ್ರಿಜ್‌ನಿಂದ ನೀರಿನ ಬಾಟಲಿ ತೆಗೆದುಕೊಂಡು ಸೋಫಾದ ಮೇಲೆ ಕುಳಿತು ನಿರಾತಂಕದಿಂದ ನೀರು ಕುಡಿಯುತ್ತಿದ್ದಾಗ, ಇದ್ದಕ್ಕಿದ್ದಂತೆ ನಿಮಗೊಂದು ಯೋಚನೆ ಹೊಳೆಯುತ್ತದೆ. ಅಯ್ಯೋ ದೇವರೇ! ನನಗೆ ಎರಡು ಮಕ್ಕಳಿವೆ. ಹಾಗಾದರೆ ಇವು ಯಾರವು? ಎಂದು ಚಿಂತಿಸಲಾರಂಭಿಸುತ್ತೀರಿ.

ದಟ್ ಇಸ್ ರಿಯಲ್ ಟೆನ್ಶನ್!

-ಕೆ.ಜಯಮ್ಮ